# ಮುಚಖಂಡಿ ಸೇತುವೆ!

ಬಾಗಲಕೋಟೆ ಜಿಲ್ಲೆಯಲ್ಲಿರುವ ಮುಚಖಂಡಿ ಊರಿನ ಕೆರೆಗೆ ಬ್ರಿಟಿಷರು 1882ರಲ್ಲಿ ಸೇತುವೆಯನ್ನು ನಿರ್ಮಿಸಿದರು. ಅಂದಿನ ಇಸವಿಯನ್ನು ಕಲ್ಲಿನ ದಿಂಡುಗಳನ್ನೇ ಬಳಸಿ ಸಂಖ್ಯೆಯ ರೂಪದಲ್ಲಿ ಸೇತುವೆ ಒಳಗೆ ಅಳವಡಿಸಿದ್ದಾರೆ.

**-ರಾಜಕುಮಾರ ಭೀ. ವಗ್ಯಾನವರ, ಬಾದಾಮಿ**







# ಕವಿ ಸರ್ವಜ್ಞನ ಸಮಾಧಿ!

19ನೇ ಶತಮಾನದ ಮಹಾ ಮಾನವತಾವಾದಿ, ಕವಿಯೇ ಸರ್ವಜ್ಞ. ಇಂತಹ ಕವಿಶ್ರೇಷ್ಠ ಜನಿಸಿದ್ದು ಹಾವೇರಿ ಜಿಲ್ಲೆಯ ಹಿರೇಕೇರೂರು ತಾಲ್ಲೂಕಿನ ಮಾಸೂರು. ಮನೆ ಮಾತಾಗಿರುವ ಈತನ ತ್ರಿಪದಿಗಳು ಸ್ವಾನುಭವ, ಅನುಭಾವದಿಂದ ಕೂಡಿದ್ದು ಸರ್ವ ಕಾಲಕ್ಕೂ ಬೋಧಪ್ರದವಾಗಿವೆ. ಇಂತಹ ಮಹಾಕವಿಗೆ ಕಟ್ಟಿರುವ ಈ ಸಮಾಧಿಯ ಮೇಲೊಂದು ಶಿಲಾಮಂಟಪವನ್ನಾದರೂ ನಿರ್ಮಿಸಿ ಕಲೆ, ಸಾಹಿತ್ಯ, ಸಂಸ್ಕೃತಿಗೆ ನೀಡಬೇಕಾದ ಮಾನ್ಯತೆಯನ್ನು ಸಲ್ಲಿಸಬಹುದು.

**-ಎಸ್.ಓಂಕಾರಯ್ಯ ತವನಿಧಿ, ದಾವಣಗೆರೆ**

# ಕಟ್ಟಿಗೆ ಘಂಟೆ

ಸಾಮಾನ್ಯವಾಗಿ ದೇವಸ್ಥಾನಗಳಲ್ಲಿ ಹಿತ್ತಾಳೆಯ ಘಂಟೆಯನ್ನು ನೋಡಿರುತ್ತೀರಿ, ಆದರೆ ಹುಬ್ಬಳ್ಳಿಯ ಸಿದ್ದಪ್ಪ ಅಜ್ಜನ ದೇವಸ್ಥಾನದಲ್ಲಿ ಕಟ್ಟಿಗೆ ಘಂಟೆಯಿದೆ. ಇದು ಭಕ್ತರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿದೆ.

**-ಮಾಂತೇಶ ಬಾಗೇವಾಡಿ, ಬಾಗಲಕೋಟೆ**

